## ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಗೋವಿಂದರಾಜು ಇವರ ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

ಕೋಲಾರ ಜಿಲ್ಲೆಯಲ್ಲಿ ಎಲ್ಲಾ ಸಾರ್ವಜನಿಕರ ಅನುಕೂಲಕ್ಕಾಗಿ ಎಲ್ಲಾ ಇಲಾಖೆಗಳು ಒಂದೇ ಸೂರಿನಡಿ ಕಾರ್ಯನಿರ್ವಹಿಸುವುದರೊಂದಿಗೆ ಹಾಗೂ ಸಾಕಷ್ಟು ಸರ್ಕಾರಿ ಕಛೇರಿಗಳು ಖಾಸಗಿ ಕಟ್ಟಡದಲ್ಲಿ ಆಡಳಿತ ನಡೆಸುತ್ತಿರುವುದು, ಸರ್ಕಾರಕ್ಕೆ ಆರ್ಥಿಕವಾಗಿ ಹೊರೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೋಲಾರದಲ್ಲಿ ಮಿನಿ ವಿಧಾನಸೌಧವನ್ನು ನಿರ್ಮಾಣ ಮಾಡಿರುವುದು ಸರಿಯಷ್ಟೆ. ಆದರೆ, ಪ್ರಾರಂಭಗೊಂಡ ದಿನದಿಂದ ಇಲ್ಲಿಯವರೆಗೂ ಕಂದಾಯ ಇಲಾಖೆಗೆ ಸೇರಿದ ಉಪ ನೋಂದಣಾಧಿಕಾರಿಗಳ ಹಾಗೂ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಸರ್ವೇಕ್ಷಣಾ ಕಛೇರಿ ಹಾಗೂ ಉಪ ನೋಂದಣಾಧಿಕಾರಿಗಳ ಕಛೇರಿ ಮತ್ತು ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗಳು ಬೇರೆ ಬೇರೆ ಕಡೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ಆದರೆ ಮಿನಿ ವಿಧಾನ ಸೌಧ ಕಟ್ಟುವಾಗ ಕಂದಾಯ ಇಲಾಖೆಯ ತಹಶೀಲ್ದಾರ ಕಛೇರಿ, ಸರ್ವೇಕ್ಷಣಾ ಕಚೇರಿ ಹಾಗೂ ಉಪ ನೋಂದಣಾಧಿಕಾರಿಗಳ ಕಛೇರಿಗಳು ಒಂದೇ ಕಟ್ಟಡದಲ್ಲಿ ಕಾರ್ಯನಿರ್ವಹಿಸುವಂತೆ ನಕ್ಷೆಯನ್ನು ಸಿದ್ಧಪಡಿಸಲಾಗಿತ್ತು. ಸಾರ್ವಜನಿಕರಿಗೆ ಒಂದು ಸೂರನಡಿ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ದೊರಕಿಸಿಕೊಡುವ ಉದ್ದೇಶದಿಂದ ಕಟ್ಟಡದ ನಕ್ಷೆಯಲ್ಲಿ ಒಂದನೇ ಅಂತಸ್ತಿನ ಪೂರ್ತಿ ಜಾಗವನ್ನು ಉಪ ನೋಂದಣಾಧಿಕಾರಿಗಳ ಕಛೇರಿ ಹಾಗೂ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗಳಿಗೆ ಅವಕಾಶ ಮಾಡಿಕೊಟ್ಟಿದ್ದರೂ ಈ ಎರಡು ಕಛೇರಿಗಳು ಮಾತ್ರ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ದೇಶವಾದರೂ ಏನು. ನಾನು ಈ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳಿಗೆ ದಿನಾಂಕ: 23–02–2021, 01–02–2022, 16–02–2022 ಹಾಗೂ 27–05–2022 ರಂದು ನಾಲ್ಕು ಪತ್ರವನ್ನು ನೀಡಿದ್ದರೂ ಸಹ ಇದುವರೆಗೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ.

ಸರ್ಕಾರ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳದಿದ್ದಲ್ಲಿ, ನಾನು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ಸತ್ಯಾಗ್ರಹವನ್ನು ನಡೆಸಲು ಉದ್ದೇಶಿಸಿದ್ದು, ಈ ವಿಷಯವನ್ನು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

ಹೇಳಿಕೆ:

ಕೋಲಾರ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಯು 2015ನೇ ಸಾಲಿನಿಂದ ಬಾಡಿಗೆ ಕಟ್ಟಡದಲ್ಲಿ, 3000 ಚ.ಅ ವಿಸ್ತೀರ್ಣದ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ನೋಂದಣಿ ಕಛೇರಿ, ಕೋಲಾರ ಇವರಿಗೆ ಅವಶ್ಯವಿರುವ 2700 ಚ.ಅ ವಿಸ್ತೀರ್ಣದ ಕಟ್ಟಡವು ಜಿಲ್ಲಾ ಆಡಳಿತ ಭವನದಲ್ಲಿ ಲಭ್ಯವಿಲ್ಲದ ಕಾರಣ ಸ್ಥಳದ ಅಭಾವ ಉಂಟಾಗಿ ಸಾರ್ವಜನಿಕರಿಗೆ ಸ್ಥಳಾವಕಾಶದ ಕೊರತೆ ಉಂಟಾಗಿರುವುದರಿಂದ, ಜಿಲ್ಲಾ ನೋಂದಣಿ ಕಛೇರಿಯನ್ನು ಸ್ಥಳಾಂತರಿಸಿರುವುದಿಲ್ಲ. ಆದ್ದರಿಂದ ಜಿಲ್ಲಾ ನೋಂದಣಿ ಕಛೇರಿಗೆ ಅವಶ್ಯವಿರುವ 2500 ರಿಂದ 3000 ಚ.ಅಗಳ ವಿಸ್ತೀರ್ಣದ ಕಟ್ಟಡವನ್ನು ಹಂಚಿಕೆ ಮಾಡಿದ್ದಲ್ಲಿ, ಕೋಲಾರ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಯನ್ನು ಜಿಲ್ಲಾ ಆಡಳಿತ ಭವನದ ಕಟ್ಟಡಕ್ಕೆ ಸ್ಥಳಾಂತರಿಸಲಾಗುತ್ತದೆ.

. . . 2

ಕೋಲಾರ ಉಪ ನೋಂದಣಿ ಕಛೇರಿಗೆ ಮಿನಿ ವಿಧಾನಸೌಧ ಕಟ್ಟಡದ ಮೊದಲನೇ ಮಹಡಿಯಲ್ಲಿ 06 ಕೊಠಡಿಗಳನ್ನು ಒದಗಿಸಲಾಗಿದೆ. ಅವುಗಳಲ್ಲಿ 03 ಕೊಠಡಿಗಳು ಒಂದು ಕಡೆ ಇದ್ದು, ಉಳಿದ 03 ಕೊಠಡಿಗಳು ಅದೇ ಮಹಡಿಯ ಬೇರೆ ಕಡೆ ಇರುತ್ತವೆ. 1ನೇ ಮಹಡಿಗೆ ಸಂಪರ್ಕಿಸಲು ಲಿಫ್ಟ್ ಸೌಲಭ್ಯ ಇರುವುದಿಲ್ಲ, ಇದರಿಂದ, ಉಪ ನೋಂದಣಿ ಕಛೇರಿಗೆ ದಸ್ತಾವೇಜು ನೋಂದಣಿಗೆ ಆಗಮಿಸುವ ಅಂಗವಿಕಲರು ಮತ್ತು ಹಿರಿಯ ನಾಗರೀಕರಿಗೆ ಮೊದಲನೇ ಮಹಡಿಗೆ ಹೋಗಲು ತೊಂದರೆಯಾಗುತ್ತದೆ. ಬೇರೆ ಬೇರೆ ಕಡೆ ಇರುವ ಕೊಠಡಿಗಳನ್ನು ಒಂದುಗೂಡಿಸಿ, ದುರಸ್ತಿ ಮಾಡಿ ಉಪ ನೋಂದಣಾಧಿಕಾರಿ ಹಾಗೂ ಸಿಬ್ಬಂದಿಗಳು ಒಂದೇಕಡೆ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡುವಂತೆ, ಉಪ ನೋಂದಣಾಧಿಕಾರಿಗಳು, ಕೋಲಾರ ಇವರು ದಿನಾಂಕ: 16-02-2021, 30-09-2021 ಮತ್ತು 12-07-2022 ರಂದು ತಹಶೀಲ್ದಾರ್ ಕೋಲಾರ ಇವರಿಗೆ ಪತ್ರ ಬರೆಯಲಾಗಿರುತ್ತದೆ. ಆದರೆ ಸದರಿ ದುರಸ್ತಿ ಕಾರ್ಯವನ್ನು ಕೈಗೊಂಡಿರುವುದಿಲ್ಲ. ಈ ಸಂಬಂಧ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್ ರವರನ್ನು ಖುದ್ದು ಭೇಟಿ ಮಾಡಿ, ದುರಸ್ತಿ ಕಾರ್ಯವನ್ನು ಕೈಗೊಳ್ಳುವಂತೆ ಕೋರಲಾಗಿರುತ್ತದೆ.

ಈ ಸಂಬಂಧ, ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ದಿನಾಂಕ: 14-09-2022ರ ಪತ್ರದಲ್ಲಿ ಜಿಲ್ಲಾಡಳಿತ ಭವನದ ಕಟ್ಟಡದಲ್ಲಿ ಅಗತ್ಯ ದುರಸ್ತಿ ಕಾರ್ಯಗಳನ್ನು ಕೈಗೊಂಡು, ನಂತರ ಉಪ ನೋಂದಣಿ ಕಛೇರಿ, ಕೋಲಾರ ಮತ್ತು ಜಿಲ್ಲಾ ನೋಂದಣಿ ಕಛೇರಿ, ಕೋಲಾರ ಇವುಗಳನ್ನು ಸ್ಥಳಾಂತರಿಸಿ, ವರದಿ ನೀಡುವಂತೆ, ಕೋಲಾರ ಜಿಲ್ಲಾ ನೋಂದಣಾಧಿಕಾರಿಗಳಿಗೆ ಮತ್ತು ಉಪ ನೋಂದಣಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.

ಸಂಖ್ಯೆ: ಕಂಇ/341/ಎಂಎನ್ಎಸ್ಎ/2022

(ಆರ್.ಅಶೋಕ)
ಕಂದಾಯ ಸಚಿವರು

c-18